**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ಬದಾಮಿ ಹಾಗೂ ಸಂಚಾರಿ ನ್ಯಾಯಾಲಯ, ಗುಳೇದಗುಡ್ಡ ಇವರ ನ್ಯಾಯಾಲಯದಲ್ಲಿ</u>**

**<u>ಸಿ.ಸಿ. ನಂ. 164/2025</u>**

1. ಕರ್ನಾಟಕ ಸರ್ಕಾರದ ಪರವಾಗಿ ಗುಳೇದಗುಡ್ಡ ಪೋಲಿಸ ಠಾಣೆ

**.......ಫಿರ್ಯಾದಿದಾರರು**

**// ವಿರುದ್ಧ //**

1. ಶ್ರೀ ಹನಮಂತ ತಂ. ರಾಮಪ್ಪ ತಳವಾರ

**........ಆರೋಪಿತರು**

ನಾನು ಶ್ರೀ ಹರೀಶ ಜಾಧವ, ಬಿ.ಕಾಂ., ಎಲ್.ಎಲ್.ಬಿ.(ಸ್ಪೆಷಲ್), ಎಲ್.ಎಲ್.ಎಮ್. ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬದಾಮಿ ಹಾಗೂ ಸಂಚಾರಿ ನ್ಯಾಯಾಲಯ,ಗುಳೇದಗುಡ್ಡ ಆದ ನಾನು ನಿಮ್ಮ ಮೇಲೆ ಅಂದರೆ,

1. ಶ್ರೀ ಹನಮಂತ ತಂ. ರಾಮಪ್ಪ ತಳವಾರ
   ವಯಸ್ಸುಃ 35 ವರ್ಷ
   ಸಾ. ಕೆಲವಡಿ, ತಾ. ಗುಳೇದಗುಡ್ಡ, ಬಾಗಲಕೋಟೆ .

ನಿಮ್ಮಗಳ ಮೇಲೆ ಈ ಕೆಳಗಿನಂತೆ ಆಪಾದನೆ ಮಾಡುವುದೇನೆಂದರೆ,

:: <u>ಆಪಾದನೆ</u> ::

ದಿನಾಂಕ 26-12-2024 ರಂದು 18-00 ಗಂಟೆಯ ಸುಮಾರಿಗೆ ಗುಳೇದಗುಡ್ಡ ಪೋಲಿಸ ಠಾಣಾ ವ್ಯಾಪ್ತಿಯ ಕೆಲವಡಿ ಗ್ರಾಮದ ಹಿರೇ ಕೆರಿಯ ಹತ್ತಿರ ಡಾಂಬರ ರಸ್ತೆಯ ಮೇಲೆ ಆರೋಪಿತನಾದ ನೀನು ನಡೆಸುತ್ತಿದ್ದ ಹಿರೋ ಎಚ್.ಎಫ್.ಡಿಲಕ್ಸ್ ಮೋಟಾರ ಸೈಕಲ್ ನಂ. ಕೆಎ-29/ಎಕ್ಸ್-8589 ನೇದ್ದನ್ನು ಗುಳೇದಗುಡ್ಡ ರೇಲ್ವೆ ಸ್ಟೇಷನ್ ಕಡೆಯಿಂದ ಕೆಲವಡಿ ಕಡೆಗೆ ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದಾ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸುತ್ತ ಬಂದು ಕೆಲವಡಿ ಗ್ರಾಮದ ಹಿರೇ ಕೆರಿಯ ಹತ್ತಿರ ಫಿರ್ಯಾದಿಯೊಂದಿಗೆ ನಡೆಯುತ್ತ ಹೊರಟಿದ್ದ ರೇಣವ್ವ ಗಂ. ಪಾಂಡಪ್ಪ ತಳವಾರ, ಸಾ: ಕೆಲವಡಿ ಇವಳಿಗೆ ಹಿಂದೆ ಹಾಯಿಸಿ ಅಪಘಾತ ಪಡಿಸಿರುತ್ತೀರಿ. ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ-2023 ಕಾಯ್ದೆ ಕಲಂ.281 ಕಾಯ್ದೆಯಲ್ಲಿ ದಂಡನೀಯ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ .

ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು, ನಿಮ್ಮ ತಪ್ಪಿನಿಂದ ಜರುಗಿದ ಅಪಘಾತದಲ್ಲಿ ಫಿರ್ಯಾದಿಯೊಂದಿಗೆ ನಡೆಯುತ್ತ ಹೊರಟಿದ್ದ ರೇಣವ್ವ ಗಂ. ಪಾಂಡಪ್ಪ ತಳವಾರ, ಸಾ: ಕೆಲವಡಿ ಇವಳಿಗೆ ಹಿಂದೆ ಹಾಯಿಸಿ ಅಪಘಾತ ಪಡಿಸಿ ತಲೆಗೆ ಭಾರಿ ಗಾಯ ಒಳಪೆಟ್ಟು ಪಡಿಸಿದ್ದು ಉಪಚಾರಕ್ಕೆ ಬಾಗಲಕೋಟೆ ಧನುಷ್ ಆಸ್ಪತ್ರೆಯಲ್ಲಿ ದಾಖಲಿಸಿದ್ದಾಗ ಉಪಚಾರ ಫಲಿಸದೇ ದಿನಾಂಕಃ 28-12-2024 ರಂದು 11-20 ಗಂಟೆಗೆ ಮರಣ ಹೊಂದುವಂತೆ ಅಪಘಾತಪಡಿಸಿರುತ್ತೀರಿ. ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ-2023 ಕಾಯ್ದೆ ಕಲಂ.106(1)ಕಾಯ್ದೆಯಲ್ಲಿ ದಂಡನೀಯ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ .

ಪ್ರ.1ಃ ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತೇ?

ಉತ್ತರಃ

ಪ್ರ.2 ಃ ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯೋ ?
ಅಥವಾ ವಿಚಾರಣೆಯಾಗಬೇಕೋ?

ಉತ್ತರ ಃ

ಆರೋಪಿತನಿಗೆ ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಇಂದು ನಮ್ಮ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತದೆಂದು ಈ ಮೂಲಕ ದೃಢೀಕರಿಸುತ್ತೇನೆ.

HARISH JADHAV
Digitally signed by HARISH JADHAV
Date: 2025.11.14 10:34:04 +0530

ಸ್ಥಳಃ ಗುಳೇದಗುಡ್ಡ
ದಿನಾಂಕಃ 11-11-2025.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,ಬದಾಮಿ
ಹಾಗೂ ಸಂಚಾರಿ ನ್ಯಾಯಾಲಯ, ಗುಳೇದಗುಡ್ಡ.